ಜಗ್ಗೇಶ್, ರಿಷಬ್‌ರಿಂದ ಮೂಲಬೃಂದಾವನ ದರ್ಶನ

ಮಂತ್ರಾಲಯದ ಗುರು ವೈಭವೋತ್ಸವದಲ್ಲಿ ನಟರು ಭಾಗಿ | ಶ್ರೀಗಳೊಂದಿಗೆ ತೆಪ್ಪೋತ್ಸವದಲ್ಲಿ ಕಾಣಿಸಿಕೊಂಡ ರಿಷಬ್, ಜಗ್ಗೇಶ್

• **ಕನ್ನಡಪ್ರಭ ವಾರ್ತೆ** ರಾಯಚೂರು

ಮಂತ್ರಾಲಯದ ಶ್ರೀರಾಘವೇಂದ್ರ ಸ್ವಾಮಿಗಳ ಮಠದಲ್ಲಿ ನಡೆಯುತ್ತಿರುವ ಶ್ರೀ ರಾಘವೇಂದ್ರ ಗುರು ವೈಭವೋತ್ಸವದಲ್ಲಿ ನಟ, ನಿರ್ದೇಶಕ ರಿಷಬ್ ಶೆಟ್ಟಿ ಮಂಗಳವಾರ ಭಾಗಿಯಾಗಿದ್ದರು.

ನಟ ಜಗ್ಗೇಶ, ಮಾಜಿ ಸಚಿವ ಡಾ.ಅಶ್ವಥ ನಾರಾಯಣ ಅವರ ಜೊತೆಗೆ ಶ್ರೀಮಠಕ್ಕೆ ಆಗಮಿಸಿದ ರಿಷಬ್ ಶೆಟ್ಟಿ ಶ್ರೀರಾಘವೇಂದ್ರ ಸ್ವಾಮಿಗಳ ಮೂಲಬೃಂದಾವನದ ದರ್ಶನ ಪಡೆದರು. ನಂತರ ಶ್ರೀ ರಾಘವೇಂದ್ರ ಗುರು ವೈಭವೋತ್ಸವ ಪ್ರಯುಕ್ತ ಶ್ರೀಮಠದಲ್ಲಿ ಶ್ರೀ ಗುರುರಾಯರ 431 ನೇ ವರ್ಧಂತಿ ಉತ್ಸವ ಪ್ರಯುಕ್ತ ಶ್ರೀಮಠದ ಸಮೀಪದಲ್ಲಿರುವ ಶ್ರೀ ಪರಿಮಳ ತೀರ್ಥ ಪುಷ್ಕರಣಿಯಲ್ಲಿ ನಡೆದ ತೆಪ್ಪೋತ್ಸವ ಹಾಗೂ ವೇದಿಕೆ ಕಾರ್ಯಕ್ರಮದಲ್ಲಿ ಪಾಲ್ಗೊಂಡರು.

ಈ ವೇಳೆ ಮಾತನಾಡಿದ ರಿಷಬ್ ಶೆಟ್ಟಿ ಅವರು, ಶ್ರೀಗುರುರಾಯರ ಜನ್ಮದಿನದ ಸಮಯದಲ್ಲಿಯೇ ಸುಕ್ಷೇತ್ರಕ್ಕೆ ಭೇಟಿ ನೀಡಿ ರಾಯರ ದರ್ಶನ ಪಡೆಯುವ ಅವಕಾಶ ಸಿಕ್ಕಿರುವುದು ತುಂಬಾ ಖುಷಿಯಾಗಿದೆ. ನನ್ನ ತಾಯಿ ಅವರು ಶ್ರೀರಾಘವೇಂದ್ರ ಸ್ವಾಮಿಗಳ ದೊಡ್ಡ ಭಕ್ತರು ಅದೇ ರೀತಿ ಡಾ.ರಾಜ್ ಕುಮಾರ ಅವರ ಅಭಿಯಾನಿಯಾಗಿದ್ದಾರೆ. ನನ್ನ ತಾಯಿ ರಾಯರಿಗೆ ಹರಿಕೆ ಹೊತ್ತುಕೊಂಡಾಗ ನಾನು ಹುಟ್ಟಿದ್ದೇನೆ. ಅದು ಸಹ ಗುರುವಾರವೇ ಜನ್ಮಿಸಿದ್ದೇನೆ. ಚಿತ್ರೀಕರಣ ಹಾಗೂ ಯಾವುದೇ ಸಮಯದಲ್ಲಿ ಸಂಕಷ್ಟ ಬಂದರೆ ರಾಯರನ್ನು ನೆನಪಿಸಿಕೊಳ್ಳುತ್ತೇನೆ ಅದು ಪರಿಹಾರವಾಗುತ್ತವೆ ಇಂತಹ ಅನೇಕ ಅನುಭವಗಳು ನನಗಾಗಿವೆ. ಚಿಕ್ಕ ವಯಸ್ಸಿನಿಂದಲೂ ಮಂತ್ರಾಲಯಕ್ಕೆ ಬರುತ್ತಿದ್ದು ಶ್ರೀಗಳ ಮಾರ್ಗ ದರ್ಶನದಲ್ಲಿ ಸಾಕಷ್ಟು ಅಭಿವೃದ್ಧಿಯಾಗಿವೆ. ಇಲ್ಲಿಗೆ ಬರುವ ಭಕ್ತರನ್ನು ಶ್ರೀಗುರುರಾಯರ ಅನುಗ್ರಹಿಸಲಿ ಎಂದರು.

ಮಂತ್ರಾಲಯದ ಶ್ರೀ ರಾಘವೇಂದ್ರ ಗುರು ವೈಭವೋತ್ಸವದ ಕೊನೆ ದಿನವಾದ ರಾಯರ 431 ನೇ ವರ್ಧಂತಿ ಉತ್ಸವದ ಪ್ರಯುಕ್ತ ಶ್ರೀಮಠದ ಸಮೀಪದಲ್ಲಿರುವ ಶ್ರೀ ಪರಿಮಳ ತೀರ್ಥ ಪುಷ್ಕರಣಿಯಲ್ಲಿ ನಡೆದ ತೆಪ್ಪೋತ್ಸವದಲ್ಲಿ ರಿಷಬ್ ಶೆಟ್ಟಿ ಹಾಗೂ ಜಗ್ಗೇಶ್ ಭಾಗಿಯಾಗಿದ್ದರು.

ಶ್ರೀಗುರುರಾಯರ ಕುರಿತ ಸಿನಿಮಾ ಮಾಡುವಾಸೆ

ನಿರ್ದೇಶಕರು ಹೇಳಿದಂತಹ ಕಥೆ ಇಷ್ಟವಾದರೆ ಸಿನಿಮಾ ಮಾಡುತ್ತೇವೆ. ನಾವು ಕಲಾವಿದರು ಒಳ್ಳೆಯ ಕಥೆ ಬಂದಾಗ, ಒಳ್ಳೆ ಪಾತ್ರದ ಅವಕಾಶ ಸಿಕ್ಕಾಗ ಹಾಗೂ ಒಳ್ಳೆಯ ನಿರ್ದೇಶಕರು, ನಿರ್ಮಾಪಕರು ಇದ್ದಾಗ ಅದನ್ನ ಮಾಡುವ ಆಸೆ ಪ್ರತಿಯೊಬ್ಬ ಕಲಾವಿದರಿಗೂ ಇರುತ್ತದೆ. ಅಂತಹ ಅವಕಾಶ, ಪಾತ್ರ ಮಾಡಲು ನನಗೆ ಇಷ್ಟ ಆಗುತ್ತದೆ ಎಂದ ರಿಷಬ್ ಶೆಟ್ಟಿ ಶ್ರೀಗುರುರಾಯರ ಕುರಿತ ಸಿನಿಮಾ ಮಾಡುವ ಬಗ್ಗೆ ಉತ್ತರಿಸಿದ ಅವರು ಅಂತಹ ಪ್ರಯತ್ನ ಮಾಡುವುದು ತುಂಬಾ ಕಷ್ಟ ಮುಂದೆ ನೋಡೋಣ ಎಂದರು.

ನಿನ್ನೆಯೇ ಜೈ ಹನುಮಾನ್ ಸಿನಿಮಾದ ಮೂಹರ್ತವಾಗಿದ್ದು, ಚಿತ್ರೀಕರಣ ಆಗಬೇಕಾಗಿದೆ, ಟೀಸರ್ ಮತ್ತು ಟ್ರೈಲರ್‌ನಿಂದ ಸಿನಿಮಾ ಹೇಗಿದೆ ಎಂಬುವುದು ತಿಳಿಯುತ್ತದೆ, ಹನುಮಂತನ ಕುರಿತು ಸಿನಿಮಾ ಮಾಡುತ್ತಿದ್ದು ಒಳ್ಳೆಯ ಸಂಗತಿಗಳೇ ಚಲನಚಿತ್ರದಲ್ಲಿ ಇರಲಿವೆ ಎಂದರು, ವಿಜಯ ದೇವರಕೊಂಡ ಹಾಗೂ ರಶ್ಮಿಕ ಮಂದಣ್ಣ ಮದುವೆ ಆಹ್ವಾನ ಪತ್ರಿಕೆ ಬಂದಿದೆಯೇ ಎನ್ನುವ ಪ್ರಶ್ನೆಗೆ ಸ್ಪಂದಿಸಲು ರಿಷಬ್ ಶೆಟ್ಟಿ ನಿರಾಕರಿಸಿದರು.

ನನಗೆ ತನು ಮನ ಎಲ್ಲವೂ ರಾಯರೇ ಆಗಿದ್ದಾರೆ: ನಟ ಜಗ್ಗೇಶ್

ರಾಯಚೂರು: ನನಗೆ ತನು ಮನ ಎಲ್ಲವೂ ರಾಯರೇ ಆಗಿದ್ದಾರೆ. ಅದಕ್ಕಾಗಿ ಅವರ ಜನ್ಮದಿನದಲ್ಲಿ ಭಾಗವಹಿಸಲು ಸುಕ್ಷೇತ್ರ ಮಂತ್ರಾಲಯ ಮಠಕ್ಕೆ ಆಗಮಿಸಿದ್ದೇನೆ ಎಂದು ನಟ, ರಾಜ್ಯಸಭಾ ಸದಸ್ಯ ಜಗ್ಗೇಶ ಹೇಳಿದರು.

ಮಂಗಳವಾರ ಮಾತನಾಡಿದ ಅವರು, ನಾನು ರಾಯರ ಸಾಮಾನ್ಯ ಭಕ್ತನಾಗಿದ್ದೇನೆ. ಪ್ರಪಂಚದಲ್ಲಿ ಮಂತ್ರಾಲಯ ಕ್ಷೇತ್ರಕ್ಕೆ ಇರುವಂತಹ ಶಕ್ತಿಯೇ ಬೇರೆ. ನಮ್ಮ ಸಮಯ ಸರಿಯಿಲ್ಲ, ಸಾಕಷ್ಟು ಸಂಕಷ್ಟಗಳು ಎದುರಾಗುತ್ತಿವೆ ಎನ್ನುವವರು ಒಮ್ಮೆ ರಾಯರ ದರ್ಶನ ಪಡೆದುಕೊಂಡು ಹೋದರೆ ಸಾಕು ಅವರಿಗೆ ಫಲ ಸಿಕ್ಕೇ ಸಿಗುತ್ತದೆ. ಗೃಹ ಪ್ರವೇಶ ಮಾಡಬೇಕು ಎಂದರೆ ನಿವೇಶನ ನೋಡಿದರೆ ಸಾಲದು ಅಲ್ಲಿ ಮನೆ ನಿರ್ಮಿಸಬೇಕು ಅದೇ ರೀತಿ ನಾವು ಏನೇ ಮಾಡಬೇಕು ಎಂದರೂ ಶ್ರದ್ಧೆಯಿಂದ ಮಾಡಬೇಕು ಅಂದಾಗ ಮಾತ್ರ ಫಲ ದೊರೆಯುತ್ತದೆ. ಶ್ರೀಕೃಷ್ಣ ಭಗವದ್ಗೀತೆಯಲ್ಲಿ ಅದನ್ನೇ ಬೋಧಿಸಿದ್ದಾರೆ ಕಾಲಗರ್ಭದಲ್ಲಿ ನಾನಿದ್ದೇನೆ ಕಾಲವನ್ನ ಗೌರವಿಸಿದರೆ ಅದು ನಮಗೆ ಗೌರವ ನೀಡುತ್ತದೆ ಸಮಯವೇ ದೇವರು ಎಲ್ಲದಕ್ಕು ಕಾಯಬೇಕು ಅಷ್ಟ ಎಲ್ಲರಿಗೂ ಒಳ್ಳೆಯದಾಗಲಿ ಎಂದು ಹೇಳಿದರು.

ಮೆರವಣಿಗೆಯಲ್ಲಿ ಮಾರಕಾಸ್ತ್ರಗಳ ಹಿಡಿದು ಡ್ಯಾನ್ಸ್: ಮೂವರ ಸೆರೆ

• **ಕನ್ನಡಪ್ರಭ ವಾರ್ತೆ,** ಕಲಬುರಗಿ.

ಮದುವೆ ಮೆರವಣಿಗೆಯಲ್ಲಿ ಮಾರಕಾಸ್ತ್ರಗಳನ್ನು ಹಿಡಿದು ಡ್ಯಾನ್ಸ್ ಮಾಡಿದ ಅಶೋಕ ನಗರ ಠಾಣೆ ವ್ಯಾಪ್ತಿಯಲ್ಲಿ ನಡೆದಂತಹ ಪ್ರಕರಣಕ್ಕೆ ಸಂಬಂಧಿಸಿದಂತೆ ಕಲಬುರಗಿ ನಗರ ಪೊಲೀಸರು ನವ ವಿವಾಹಿತ, ಆತನ ಇಬ್ಬರು ಗೆಳೆಯರು ಸೇರಿದಂತೆ ಮೂವರ ವಿರುದ್ಧ ಪ್ರಕರಣ ದಾಖಲಿಸಿ ವಶಕ್ಕೆ ಪಡೆದಿದ್ದಾರೆ.

ಸದರಿ ಘಟನೆಗೆ ಸಂಬಂಧಿಸಿದಂತೆ ಸಂಜಯ್, ರಾಜವರ್ಧನ್ ಮತ್ತು ತುಷಾರ್ ಎಂಬ ಮೂವರು ಆರೋಪಿತರನ್ನು ಬಂಧಿಸಲಾಗಿದೆ ಎಂದು ಪೊಲೀಸ್ ಕಮೀಶ್ನರ್ ಡಾ. ಶರಣಪ್ಪ ಢಗೆ ತಿಳಿಸಿದ್ದಾರೆ. ಮದುವೆ ಮೆರವಣಿಗೆಯಲ್ಲಿ ಮಾರಕಾಸ್ತ್ರ ಹಿಡಿದು ಡ್ಯಾನ್ಸ್ ಮಾಡಿದ್ದ ವಿಡಿಯೋ ಸಾಮಾಜಿಕ ಜಾಲತಾಣದಲ್ಲಿ ವೈರಲ್ ಆಗಿ ಸುದ್ದಿಯಾಗಿತ್ತಲ್ಲದೆ ಸಾರ್ವಜನಿಕ ವಲಯದಿಂದ ತೀವ್ರ ಟೀಕೆಗೆ ಗುರಿಯಾಗಿತ್ತು. ಇಂತಹ ಘಟನೆಗೆ ಕಾರಣರಾದವರ ವಿರುದ್ಧ ಕ್ರಮಕ್ಕೆ ಆಗಹವೂ ಕೇಳಿ ಬಂದತ್ತು. ವೈರಲ್ ಆದ ವಿಡಿಯೋ, ಅದನ್ನು ಹಂಚಿಕೊಂಡ ವ್ಯಕ್ತಿಗಳು ಸೇರಿದಂತೆ ಹಲವರ ವಿಚಾರಣೆ ನಡೆಸಿದ ನಗರ ಪೊಲೀಸರು ಅದು ನಗರ ಶಕ್ತಿ ನಗರದಲ್ಲಿನ ಮದುವೆ ಮೆರವಣಿಗೆ ವಿಡಿಯೋ ಎಂಬುದನ್ನು ಪತ್ತೆ ಹಚ್ಚಿದ್ದರು.

ಅಶೋಕ ನಗರ ಪೊಲೀಸ್ ಠಾಣಾ ವ್ಯಾಪ್ತಿಯ ಶಕ್ತಿ ನಗರದ ಆದರ್ಶ ಕಲ್ಯಾಣ ಮಂಟಪದಲ್ಲಿ ನಡೆದ ತುಷಾರ್‌ಎಂಬ ಯುವಕನ ಮದುವೆ ಕಾರ್ಯಕ್ರಮದಲ್ಲಿ ಸಂಜಯ್ ಹಾಗೂ ರಾಜವರ್ಧನ್ ಎಂಬುವವರು ಮಾರಕಾಸ್ತ್ರಗಳೊಂದಿಗೆ ಡಾನ್ಸ್ ಮಾಡಿದ್ದರು.

ಮದುವೆ ಗಂಡು ತುಷಾರ್ ಈತನ ಪ್ರಚೋದನೆಯಿಂದ ಸಾರ್ವಜನಿಕರಿಗೆ ಭಯಭೀತಿ ಹುಟ್ಟಿಸುವ ರೀತಿಯಲ್ಲಿ ಕೈಯಲ್ಲಿ ಹರಿತವಾದ ಚಾಕು ಮತ್ತು ತಲವಾರ ಹಿಡಿದುಕೊಂಡು ಡಾನ್ಸ್ ಮಾಡಿರುವ ವಿಡಿಯೋ ಸಾಮಾಜಿಕ ಜಾಲತಾಣಗಳಲ್ಲಿ ವೈರಲ್ ಆಗಿದ್ದವು.

ಈ ಘಟನೆ ಹಿನ್ನೆಲೆಯಲ್ಲಿ ಅಶೋಕ ನಗರ ಪೊಲೀಸ ಠಾಣೆಯಲ್ಲಿ ಎಫ್‌ಐಆರ್ . 23/2026 ಭಾರತೀಯ ನ್ಯಾಯ ಸಂಹಿತೆಯ ಕಲಂ 54, 351(2) ಆರ್/ಡಬ್ಲ್ಯೂ 3(5) ಬಿಎನ್‌ಎಸ್ -2023 ಮತ್ತು 25(1)(ಎ) ಆಯುಧ ಕಾಯ್ದೆ ಅಡಿಯಲ್ಲಿ ಸ್ವಯಂಪ್ರೇರಿತವಾಗಿ ಪ್ರಕರಣ ದಾಖಲಿಸಿಕೊಂಡಿದ್ದಾರೆ.

ರಾಯಚೂರು ಜಿಲ್ಲೆಯಾದ್ಯಂತ ಅಕಾಲಿಕ ಮಳೆಯ ಅವಾಂತರ

ರಾಯಚೂರು: ಬೇಸಿಗೆಯ ಸುಡು ಬಿಸಿಲಿನಲ್ಲಿ ಏಕಾಏಕಿಯಾಗಿ ಸುರಿದ ಮಳೆಯು ಹಲವೆಡೆ ಅವಾಂತರಗಳನ್ನುಂಟು ಮಾಡಿದೆ.

ಮಂಗಳವಾರ ಬೆಳಗಿನ ಜಾವ ಜಿಲ್ಲಾ ಕೇಂದ್ರವಾದ ರಾಯಚೂರು ನಗರ ಸೇರಿ ವಿವಿಧೆಡೆ ಅಕಾಲಿಕ ಮಳೆ ಸುರಿದ ಪರಿಣಾಮ ಜೋಳ ಬೆಳೆದ ರೈತರು ಆತಂಕ್ಕೀಡಾಗಿದ್ದು, ಜಮೀನಿನಲ್ಲಿ ಒಣಗಲಿಟ್ಟ ಮೆಣಸಿನ ಕಾಯಿ ಮಳೆಯಿಂದ ಹೊದ್ದೆಯಾಗಿ ರೈತರನ್ನ ಕಂಗಾಲು ಮಾಡಿದೆ.

ಮಳೆಯಿಂದಾಗಿ ರಾಯಚೂರು ತಾಲೂಕಿನ ಮನ್ಸಲಾಪೂರ, ಹೊಸಪೇಟೆ, ಮರ್ಚೇಡ್, ಮಲ್ಲಾಪೂರ, ಜೇಗರಕಲ್ ಸೇರಿ ಸುತ್ತಮುತ್ತಲಿನ ಪ್ರದೇಶಗಳಲ್ಲಿ ಬೆಳೆದ ಬಿಳಿ ಜೋಳಕ್ಕೆ ಹಾನಿ ಉಂಟು ಮಾಡಿದೆ ಇಷ್ಟೇ ಅಲ್ಲದೇ ಸಾಲ ಮಾಡಿ ಬೆಳೆದ ಒಣ ಮೆಣಸಿನಕಾಯಿ ರಾಶಿಗಳು ಮಳೆಗೆ ಹಾಳಾಗಿ ರೈತರಲ್ಲಿ ಆತಂಕವನ್ನು ಸೃಷ್ಟಿಸಿದೆ.

ಜೋಳ ಕಟಾವು ಮಾಡಿದ್ದರಿಂದ ರಾಶಿ ಸಂದರ್ಭದಲ್ಲಿ ಜೋಳ ಕಪ್ಪಾಗಲಿದೆ. ಇದರಿಂದ ರೈತರು ಹಾನಿ ಅನುಭವಿ ಸುವಂತಾಗಿದೆ. ಮೋಡ ಕವಿದ ವಾತಾವರಣದಿಂದ ರೈತರಲ್ಲಿ ಆತಂಕಕ್ಕೆ ಕಾರಣವಾಗಿದೆ. ಜಿಲ್ಲೆಯ ಕೆಲವು ಪ್ರದೇಶಗಳಲ್ಲಿ ಮೋಡ ಮುಸುಕಿದ ವಾತಾವರಣವಿದೆ. ಹಲವು ಗ್ರಾಮಗಳಲ್ಲಿ ಅಪಾರ ಪ್ರಮಾಣದಲ್ಲಿ ಬೀಳಿಜೋಳ, ಕಟಾವು ಮಾಡಿ ಇನ್ನೇನು ರಾಶಿ ಮಾಡಬೇಕು ಎನ್ನುವಷ್ಟರಲ್ಲಿ ಮಳೆಯಿಂದಾಗಿ ರೈತರು ಸಮಸ್ಯೆ ಎದುರಾಗಿದ.

ಬೇಸಿಗೆ ಬಿರು ಬಿಸಿಲಿನಲ್ಲಿ ಅಕಾಲಿಕ ಮಳೆಯಾಗಿದೆ ಅದೂ ಹೋಲಿ ಹಬ್ಬದ ಮುನ್ನ ಮಳೆಯಾಗಿರುವುದು ಮುಂದಿನ ಮುಂಗಾರು ಉತ್ತಮವಾಗಿರಲಿದೆ ಎನ್ನುವ ಮುನ್ಸೂಚನೆಯ ನಂಬಿಕೆಗೆ ಇಂಬುನೀಡಿದೆ.

ಉದ್ಯಮಿಯಾಗುವ ಕನಸನ್ನು ನನಸಾಗಿಸಿಕೊಂಡ

ಎಂ.ವಿನಯ್‌ಕುಮಾರ್

ಸಮಾಜಸೇವೆಯನ್ನು ಗುರಿಯಾಗಿಸಿಕೊಂಡು, ಸಕ್ರಿಯಾಶೀಲ ಬೆಳವಣಿಗೆಯೊಂದಿಗೆ, ಯುವ ಉದ್ಯಮಿಯಾಗಿ ಬೆಳವಣಿಗೆ ಸಾಧಿಸುತ್ತಿರುವವರು ಎಂ.ವಿನಯ್‌ಕುಮಾರ್. ಮೂವತ್ತಾರು ವರ್ಷದ ವಿನಯ್‌ಕುಮಾರ್ ಹುಟ್ಟಿದ್ದು ಮಂಡ್ಯದಲ್ಲಿ. ತಂದೆ ಮಂಜುನಾಥ್. ರಾಜ್ಯ ಕೃಷಿ ಮತ್ತು ಗ್ರಾಮೀಣ ಅಭಿವೃದ್ಧಿ ಬ್ಯಾಂಕ್ ವ್ಯವಸ್ಥಾಪಕರು. ತಾಯಿ ರಾಜೇಶ್ವರಿ ಸಮಾಜಮುಖಿ ಕೆಲಸಗಳಲ್ಲಿ ನಿರತರಾಗಿದ್ದಾರೆ.

ಎಂ.ವಿನಯ್‌ಕುಮಾರ್ ಓದಿದ್ದು ಮೆಕ್ಯಾನಿಕಲ್ ಇಂಜಿನಿಯರ್. 2013ರಲ್ಲಿ ಪದವಿ ಗಳಿಸಿದ ಇವರು ಮೈಷುಗರ್ ಕರ್ಖಾನೆಯಲ್ಲಿ ಟ್ರೈನಿ ಆಗಿ ಆರು ತಿಂಗಳು ಕೆಲಸ ನಿರ್ವಹಿಸಿದರು. ಚಿಕ್ಕವಯಸ್ಸಿನಿಂದಲೂ ಉದ್ಯಮಿಯಾಗುವ ಕನಸು ಹೊತ್ತವರು. ತಾವು ಕಟ್ಟಿದ್ದ ಕನಸನ್ನು ನನಸಾಗಿಸಿಕೊಳ್ಳಲು ಆರಂಭದಲ್ಲಿ ಬೆಂಗಳೂರು ಡೋರ್ ಪ್ಲಾಂಟ್ ಸರ್ವೀಸಸ್ ಪ್ರೈವೇಟ್ ಲಿಮಿಟೆಡ್ ಸಂಸ್ಥೆಯನ್ನು ಸ್ಥಾಪಿಸಿದರು. ಆ ಮೂಲಕ ಭಾರತದಲ್ಲಿ ಮೊದಲ ಬಾರಿಗೆ ಗಿಡಗಳನ್ನು ಆನ್ ಲೈನ್‌ನಲ್ಲಿ ಆರ್ಡರ್ ಮಾಡಿ ತೆಗೆದುಕೊಳ್ಳುವ ಸಂಸ್ಥೆಯನ್ನು ಹುಟ್ಟುಹಾಕಿದರು. ಮಾಜಿ ಸಚಿವ ಜನಾರ್ದನ ರೆಡ್ಡಿ ಮಗಳ ವಿವಾಹಕ್ಕೆ ಇವರ ಸಂಸ್ಥೆಯಿಂದ 50ಸಾವಿರ ಶ್ರೀಗಂಧ, ತುಳಸಿ ಗಿಡಗಳನ್ನು ನೀಡಲಾಗಿತ್ತು.

2018ರಲ್ಲಿ ಮಂಡ್ಯದಲ್ಲಿ ಪ್ರತಿಷ್ಠಿತ ಹೀರೋ ಎಲೆಕ್ಟ್ರಿಕ್ ಕಂಪನಿಯ ಎಲೆಕ್ಟ್ರಿಕ್ ಸ್ಕೂಟರ್‌ಗಳು ಮಾರುಕಟ್ಟೆಗೆ ಬಿಡುಗಡೆಯಾದವು. ವಿನಯ್ ಕುಮಾರ್ ಆ ಕಂಪನಿಯ ಡೀಲರ್‌ಶಿಪ್ ಪಡೆದು ಕೊಂಡು ಇ-ಮಾಂಡವ್ಯ ಮೋಟಾರ್ಸ್ ಎಲೆಕ್ಟ್ರಿಕಲ್ ವೆಹಿಕಲ್ ಶೋರೂಂ ಮತ್ತು ಸರ್ವೀಸ್ ಸೆಂಟರ್‌ನ್ನು ಮಂಡ್ಯದಲ್ಲಿ ತೆರೆದರು. ಇದರೊಂದಿಗೆ ತಾವು ಉದ್ಯಮಿಯಾಗುವ ಕನಸನ್ನು ನನಸು ಮಾಡಿಕೊಂಡರು.

ಒಬ್ಬ ಉದ್ಯಮಿಯಾಗಿ ತಾನು ಗಳಿಸಿದ ಲಾಭವನ್ನು ಜನರಿಗೆ ಕೊಡಬೇಕೆಂಬ ಆಸೆಯನ್ನು ಹೊತ್ತವರು ವಿನಯ್‌ಕುಮಾರ್. ಪ್ರಾಮಾಣಿಕವಾಗಿ ಎಲೆಕ್ಟ್ರಿಕ್ ವೆಹಿಕಲ್ ಉದ್ಯಮ ನಡೆಸಬೇಕೆಂಬ ಮಹತ್ವಾಕಾಂಕ್ಷೆಯೊಂದಿಗೆ ಷೋ ರೂಂ ತೆರೆದರು.

ಎಲೆಕ್ಟ್ರಿಕ್ ಸ್ಕೂಟರ್‌ಗಳ ಬಗ್ಗೆ ಆಗಿನ್ನೂ ಜನರಿಗೆ ಹೆಚ್ಚು ತಿಳಿದಿರಲಿಲ್ಲ. ಹಾಗಾಗಿ ಹಳ್ಳಿ ಹಳ್ಳಿಗೆ ಹೋಗಿ ಜನರಲ್ಲಿ ಜಾಗೃತಿ ಮೂಡಿಸಿ ಉದ್ಯಮ ವನ್ನು ಯಶಸ್ವಿಯಾಗಿ ಮುನ್ನಡೆಸಿದರು. ಮೂರು ವರ್ಷದಲ್ಲಿ ಮೂರು ಸಾವಿರಕ್ಕೂ ಹೆಚ್ಚು ವಾಹನಗಳನ್ನು ಮಾರಾಟ ಮಾಡಿ ಯಶಸ್ವಿ ಉದ್ಯಮಿ ಎನಿಸಿದರು. ಇವರ ಕಾರ್ಯವ್ಯಾಪ್ತಿ ಮಂಡ್ಯಕ್ಕಷ್ಟೇ ಸೀಮಿತವಾಗಿರದೆ 2023ರಲ್ಲಿ ಮೈಸೂರಿನಲ್ಲಿ ಒಡೆಯರ್ ಎಲೆಕ್ಟ್ರಿಕ್ ವೆಹಿಕಲ್ ಮೋಟರ್ಸ್ ಪ್ರೈವೇಟ್ ಲಿಮಿಟೆಡ್ ಹೆಸರಿನ ಷೋರೂಂ ತೆರೆದರು. ನಂತರ ಪಾಂಡವಪುರಕ್ಕೂ ವಿಸ್ತರಣೆ ಮಾಡಿದರು.

ಎಲೆಕ್ಟ್ರಿಕ್ ವೆಹಿಕಲ್‌ಗೆ ಮುಖ್ಯವಾಗಿ ಮೋಟಾರ್, ಕಂಟ್ರೋಲರ್, ಕನ್ವರ್ಟರ್, ಚಾರ್ಜರ್ ಇನ್ನಿತರ ಸಾಮಗ್ರಿಗಳು ಅವಶ್ಯವಾಗಿ ಬೇಕಿವೆ. ಅದನ್ನು ದೃಷ್ಟಿಯಲ್ಲಿಟ್ಟುಕೊಂಡು ಮುಂದಿನ ದಿನಗಳಲ್ಲಿ ಮಂಡ್ಯದ ಇಂಡಸ್ಟ್ರಿಯಲ್ ಏರಿಯಾದಲ್ಲಿ ಕಂಟ್ರೋಲರ್ ಕಾಂಪೋನೆಂಟ್ ತಯಾರಿಸುವ ಕಂಪನಿಯೊಂದನ್ನು ಆರಂಭಿಸುವ ಉದ್ದೇಶವನ್ನು ವಿನಯ್‌ಕುಮಾರ್ ಹೊಂದಿದ್ದಾರೆ.

ಪಪಾಸ್ಕಂದ ಪ್ರೈವೇಟ್ ಲಿಮಿಟೆಡ್‌ನಡಿ ಇಸ್ತ್ರೀ ಡಾಟ್ ಕಾಮ್ ಇನ್ನಿತರ ಕಾರ್ಯಚಟುವಟಿಕೆಗಳನ್ನು ಆರಂಭಿಸಿ ಕನಿಷ್ಠ 500 ಜನರಿಗೆ ಕೆಲಸ ಕೊಡುವ ನಿಟ್ಟಿನಲ್ಲಿ ಒಂದಷ್ಟು ಯೋಜನೆಗಳನ್ನು ರೂಪಿಸಿಟ್ಟುಕೊಂಡಿದ್ದಾರೆ.

ಉದ್ಯಮ ಮತ್ತು ಸಾಮಾಜಿಕ ಚಟುವಟಿಕೆಗಳಿಗೆ ಪತ್ನಿ ಕೂಡ ಬೆಂಬಲವಾಗಿ ನಿಂತಿದ್ದಾರೆ. ಕುಟುಂಬ ನಿರ್ವಹಣೆಯ ಜೊತೆಯಲ್ಲೇ ಪತಿಗೆ ಎಲ್ಲ ರೀತಿಯಲ್ಲೂ ಸಹಕಾರಿಯಾಗಿ ಅವರ ಕನಸುಗಳ ಸಾಕಾರಕ್ಕೆ ಹೆಗಲುಕೊಟ್ಟಿದ್ದಾರೆ. ಯಶಸ್ವಿ ಪುರುಷನ ಬೆನ್ನಹಿಂದೆ ಒಬ್ಬ ಹೆಣ್ಣು ಇರುತ್ತಾಳೆಂಬುದನ್ನು ಸಾಬೀತು ಪಡಿಸಿದ್ದಾರೆ. ವಿನಯ್‌ಕುಮಾರ್ ತಂದೆ-ತಾಯಿ, ಪತ್ನಿ, ಹಾಗೂ ಇಬ್ಬರು ಪುತ್ರಿಯರೊಂದಿಗೆ ತುಂಬು ಜೀವನ ನಡೆಸುತ್ತಿದ್ದಾರೆ.

ಉದ್ಯಮ ಮತ್ತು ಸಮಾಜ ಎರಡೂ ವಿಷಯಗಳನ್ನು ಸಮಚಿತ್ತ ಭಾವದಿಂದ ತೆಗೆದುಕೊಂಡು ಹೋಗುವ ದಿಸೆಯಲ್ಲಿ ಮಹತ್ವದ ಹೆಜ್ಜೆಯನ್ನಿಡುತ್ತಿರುವವರು ಎಂ.ವಿನಯ್‌ಕುಮಾರ್ ಇಂದಿನ ಯುವಕರಿಗೆ ಮಾದರಿಯಾಗಿದ್ದಾರೆ.

ಎಲ್ಲರೊಳಗೊಂದಾಗು ಮಂಕುತಿಮ್ಮ ಟ್ರಸ್ಟ್ ಸ್ಥಾಪಿಸಿ ಸಮಾಜಸೇವೆ

ವಿನಯ್‌ಕುಮಾರ್ ಉದ್ಯಮಿಯಾಗಬೇಕೆಂಬ ಕನಸನ್ನು ಸಾಕಾರಗೊಳಿಸಿಕೊಳ್ಳುವುದರ ಜೊತೆಗೆ ಸಮಾಜಮುಖಿಯಾಗಿ ಒಂದಷ್ಟು ಸೇವೆ ಮಾಡಬೇಕೆಂಬ ಹಂಬಲವನ್ನೂ ಹೊತ್ತಿದ್ದಾರೆ. ಮಂಡ್ಯ ರೈತರು, ಯುವಕರು, ಅಶಕ್ತರ ಪರವಾಗಿ ಕೆಲಸ ಮಾಡಬೇಕೆಂಬ ಸದುದ್ದೇಶದೊಂದಿಗೆ ಎಲ್ಲರೊಳಗೊಂದಾಗು ಮಂಕುತಿಮ್ಮ ಟ್ರಸ್ಟ್ ಆರಂಭಿಸಿದರು.

ಕಳೆದ ಆರೇಳು ವರ್ಷಗಳಿಂದ ವೈಶಿಷ್ಟ್ಯಪೂರ್ಣ ಕಾರ್ಯಕ್ರಮವನ್ನು ನಡೆಸಿಕೊಂಡು ಬರುತ್ತಿದ್ದಾರೆ. ಇದುವರೆಗೆ ಕಾರ್ಯಕ್ರಮಕ್ಕೆ ಯಾರಿಂದಲೂ ಹಣ ಪಡೆದ ಉದಾಹರಣೆಯೇ ಇಲ್ಲ. ತಮ್ಮ ಶಕ್ತಾನುಸಾರ ಕಾರ್ಯಕ್ರಮಗಳನ್ನು ನಡೆಸಿಕೊಂಡು ಬರುತ್ತಾ ಎಲ್ಲರ ಪ್ರೀತಿ, ವಿಶ್ವಾಸ, ಮೆಚ್ಚುಗೆ ಗಳಿಸಿದ್ದಾರೆ. ಸಾಹಿತ್ಯ, ಕ್ರೀಡೆ, ಸೇವಾ ಕ್ಷೇತ್ರ, ನಾಟಕ, ಸಂಗೀತ, ಕಲೆ, ಆರೋಗ್ಯ, ಎಲ್ಲರೂ ಒಂದು ಎಂಬ ಭಾವನೆ ಮೂಡಿಸುವುದು ಟ್ರಸ್ಟ್‌ನ ಮುಖ್ಯ ಧ್ಯೇಯವಾಗಿದೆ. ಇದಕ್ಕೆ ಸಂಘ-ಸಂಸ್ಥೆಗಳೂ ಪಕ್ಷಾತೀತವಾಗಿ ಇವರಿಗೆ ಬೆಂಬಲ ಸೂಚಿಸುತ್ತಿವೆ.

ಮಂಡ್ಯ ಇತಿಹಾಸದಲ್ಲೇ ಪ್ರಥಮ ಬಾರಿಗೆ ಮಗಳ ಜನ್ಮದಿನದಂದು ತಂದೆಯೇ ಬರೆದ ಪುಸ್ತಕವನ್ನು ಮಗಳಿಗೆ ಅರ್ಪಿಸಿ ಯಾವುದೇ ಅಬ್ಬರವಿಲ್ಲದೆ ಹುಟ್ಟುಹಬ್ಬ ಆಚರಿಸಿ ಕೊಂಡರು. ಸಂಸ್ಕೃತಿಗೆ ಅನುಗುಣವಾಗಿ ಸತ್ಯಾವತಾರ ಕಾರ್ಯಕ್ರಮ ಆಯೋಜಿಸಿ ಮಂಡ್ಯ ಜನರ ಮೆಚ್ಚುಗೆಗೆ ಪಾತ್ರರಾಗಿದ್ದಾರೆ.

MANAPPURAM FINANCE LTD.
CIN : L65910KL1992PLC006623
Registered Office : W - 4/ 638A, Manappuram House,
P.O. Valapad, Thrissur - 680 567, Kerala, India

ಹರಾಜು ಪ್ರಕಟಣೆ

ಈ ಕೆಳಗಿನ ಖಾತೆಗಳಲ್ಲಿ ಅಡವಿಟ್ಟಿರುವ ಚಿನ್ನಾಭರಣಗಳ ಸಾರ್ವಜನಿಕ ಹರಾಜನ್ನು 16/03/2026 ರಂದು ಬೆಳಿಗ್ಗೆ 10.00 ಗಂಟೆಯಿಂದ ಈ ಕೆಳಗಿನ ಶಾಖೆಗಳಲ್ಲಿ ನಡೆಸಲು ಉದ್ದೇಶಿಸಲಾಗಿದೆ ಎಂದು ಈ ಮೂಲಕ ವಿಶೇಷವಾಗಿ ಸಾಲಗಾರರಿಗೆ ಮತ್ತು ಸಾರ್ವಜನಿಕರಿಗೆ ತಿಳಿಸಲಾಗಿದೆ. ನೋಂದಾಯಿತ ಪತ್ರಗಳ ಮೂಲಕ ತಿಳಿಸಲಾಗಿದ್ದರೂ ಸಾಲದ ಮೊತ್ತವನ್ನು ಪಾವತಿಸಲು ವಿಫಲರಾದ ಸುಸ್ತಿದಾರ ಗ್ರಾಹಕರ ಚಿನ್ನದ ಆಭರಣಗಳನ್ನು ಹರಾಜು ಮಾಡಲಾಗುತ್ತದೆ. ಹರಾಜಾಗದ ವಸ್ತುಗಳನ್ನು ಯಾವುದೇ ಸೂಚನೆ ಇಲ್ಲದೆ ಬೇರೆ ಯಾವುದೇ ದಿನಗಳಲ್ಲಿ ಹರಾಜು ಮಾಡಲಾಗುವುದು. ಹರಾಜಿನ ದಿನಾಂಕದಂದು ಚಿನ್ನದ ಮಾರುಕಟ್ಟೆ ಬೆಲೆ ಅಥವಾ ಸರಾಸರಿ 30 ದಿನಗಳ IBJA ದರದ 85%, ಯಾವುದು ಹೆಚ್ಚೋ ಅದರ ಆಧಾರದ ಮೇಲೆ ಮೀಸಲು ಬೆಲೆಯನ್ನು ನಿಗದಿಪಡಿಸಲಾಗುತ್ತದೆ. ಸ್ಥಳ ಅಥವಾ ದಿನಾಂಕದಲ್ಲಿನ ಬದಲಾವಣೆಯನ್ನು (ಯಾವುದಾದರೂ ಇದ್ದರೆ) ಹರಾಜು ಕೇಂದ್ರದಲ್ಲಿ ಮತ್ತು ಕಂಪನಿಯ ವೆಬ್‌ಸೈಟ್‌ನಲ್ಲಿ ಪ್ರದರ್ಶಿಸಲಾಗುತ್ತದೆ. ಕೆಳಗೆ ನೀಡಲಾದ ವಿವರಗಳು ಶಾಖೆಯ ಹೆಸರು, ಸಾಲದ ಸಂಖ್ಯೆ, ಗ್ರಾಹಕರ ಹೆಸರು, ಒಟ್ಟು ಬಾಕಿ ಮೊತ್ತ ('ನಲ್ಲಿ) ಐಟಂ ಹೆಸರಿನ ಕ್ರಮದಲ್ಲಿದೆ

ಅಡವುಗಳ ಪಟ್ಟಿ :
ರಾಯಚೂರು, ಗಂಜ್ ಮೇನ್ ರೋಡು, 0110680700047096, ಮನೋಹರ್, 20000/-, ಸ್ಟಡ್ 1, ಗುಲ್ಬರ್ಗ, ಜೇವರ್ಗಿ, 0136250700014328, ನಾಗರಾಜ, 6000/-, ಸ್ಟಡ್ 1,

ಮೇಲಿನ ಹರಾಜಿನಲ್ಲಿ ಭಾಗವಹಿಸಲು ಬಯಸುವ ವ್ಯಕ್ತಿಗಳು ಈ ಮುಂದೆ ತಿಳಿಸಿರುವುದನ್ನು ಅನುಸರಿಸತಕ್ಕದ್ದು:- ಆಸಕ್ತಿಯುಳ್ಳ ಸವಾಲು ಕೂಗುವವರು (ಬಿಡ್ಡರ್ ಗಳು) ಎನ್‌ಇಎಫ್ ಟಿ/ಆರ್ ಟಿಜಿಎಸ್ ವಿಧಾನದ ಮೂಲಕ ರೂ. 10,000/ ಅನ್ನು ಇಎಂಡಿ (ವಿಫಲಗೊಂಡ ಸವಾಲು ಕೂಗುವವರಿಗೆ ಮರುಪಾವತಿಯಾಗುವಂಥದ್ದು) ಆಗಿ ಹರಾಜಿನ ದಿನದಂದೇ ಸಲ್ಲಿಸಬೇಕು. ಸವಾಲು ಕೂಗುವವರು ಮಾನ್ಯವಾದ ಐಡಿ ಕಾರ್ಡ್/ಪ್ಯಾನ್ ಕಾರ್ಡ್ ಇಟ್ಟುಕೊಂಡಿರಬೇಕು. ಹೆಚ್ಚಿನ ವಿವರಗಳಿಗಾಗಿ ದಯವಿಟ್ಟು 9072607147 ಅನ್ನು ಸಂಪರ್ಕಿಸಿ.

ಅಧಿಕೃತ ಅಧಿಕಾರಿ.
ಮಣಪ್ಪುರಂ ಫೈನಾನ್ಸ್ ಲಿ. ಪರವಾಗಿ

ಬೆಂಗಳೂರು ದಕ್ಷಿಣ ನಗರ ಪಾಲಿಕೆ

ಕಾರ್ಯಪಾಲಕ ಅಭಿಯಂತರರ ಕಛೇರಿ (ಸಮನ್ವಯ ಮತ್ತು ಯೋಜನೆ), ಜಯನಗರ ವಲಯ ಕಛೇರಿ ಸಂಕೀರ್ಣ, 9ನೇ ಮುಖ್ಯರಸ್ತೆ, 9ನೇ ಅಡ್ಡರಸ್ತೆ, ಜಯನಗರ 2ನೇ ಬ್ಲಾಕ್, ಬೆಂಗಳೂರು – 560011.

ಸಂಖ್ಯೆ: ಕಾಅ(ಸಿ.ಪಿ)/ಬೆಂದನಪಾ/ಕೆಪಿಪಿಪಿ/ಟಿಎನ್-07/2025-26 ದಿನಾಂಕ: 24-02-2026

ಟೆಂಡರ್‌ಗಾಗಿ ಆಹ್ವಾನ (ಐಎಫ್‌ಟಿ) – (ಅಲ್ಪಾವಧಿ)

(ಏಕ ಲಕೋಟೆ ಪದ್ಧತಿ) (ಜಿಕೆ ಕರ್ನಾಟಕ ಪಬ್ಲಿಕ್ ಪ್ರೊಕ್ಯೂರ್‌ಮೆಂಟ್ ಪೋರ್ಟಲ್ ಮೂಲಕ ಮಾತ್ರ)

ಕಾರ್ಯಪಾಲಕ ಅಭಿಯಂತರರು, ಸಮನ್ವಯ ಮತ್ತು ಯೋಜನೆ, ಬೆಂದನಪಾ, ಬೆಂಗಳೂರು ಇವರು ಈ ಕೆಳಕಂಡ ಸೇವೆಗಾಗಿ ಯಾವುದೇ ರಾಜ್ಯ ಸರ್ಕಾರದ ಸಂಸ್ಥೆಗಳಲ್ಲಿ ನೋಂದಾಯಿಸಿರುವ ಅರ್ಹ ಏಜೆನ್ಸಿದಾರರಿಂದ ಟೆಂಡರ್‌ನ್ನು ಆಹ್ವಾನಿಸಿದ್ದಾರೆ.

ಕ್ರ. ಸಂ.	ಯೋಜನೆಯ ಹೆಸರು
1	ಬೆಂಗಳೂರು ದಕ್ಷಿಣ ನಗರ ಪಾಲಿಕೆಯ ಸಾರ್ವಜನಿಕ ಸಂಪರ್ಕ ಕಛೇರಿ ವಿಭಾಗಕ್ಕೆ 1 ವರ್ಷದ ಅವಧಿಗೆ ಹೊರಗುತ್ತಿಗೆ ಕೌಶಲ್ಯಪೂರ್ಣ ನೌಕರರನ್ನು ಒದಗಿಸುವುದು. **ಟೆಂಡರಿಗಿಟ್ಟ ಮೊತ್ತ (ರೂ. ಲಕ್ಷಗಳಲ್ಲಿ): 23.80, ಇ.ಎಂ.ಡಿ ಮೊತ್ತ (ರೂ. ಗಳಲ್ಲಿ): 47,600/-**

ಟೆಂಡರ್ ವೇಳಾಪಟ್ಟಿ: 1) ಟೆಂಡರ್ ಡಾಕ್ಯೂಮೆಂಟ್‌ಗಳನ್ನು ಜಿಕೆ ಕರ್ನಾಟಕ ಪಬ್ಲಿಕ್ ಪ್ರೊಕ್ಯೂರ್‌ಮೆಂಟ್ ಪೋರ್ಟಲ್ ವೆಬ್‌ಸೈಟ್: **https://kppp.karnataka.gov.in** ಮೂಲಕ ಡೌನ್‌ಲೋಡ್ ಮಾಡಿಕೊಳ್ಳಬಹುದು. 2) ಟೆಂಡರ್‌ಗಳನ್ನು ಸ್ವೀಕರಿಸುವ ಕೊನೆಯ ದಿನಾಂಕ ಮತ್ತು ಸಮಯ: **07-03-2026 ರಂದು ಸಂಜೆ 4.00 ಗಂಟೆವರೆಗೆ.** 3) ತಾಂತ್ರಿಕ ಬಿಡ್‌ನ್ನು ತೆರೆಯುವ ದಿನಾಂಕ: **09-03-2026 ರ ಸಂಜೆ 4.00 ಗಂಟೆಗೆ.** 4) ಆರ್ಥಿಕ ಬಿಡ್‌ನ್ನು ತೆರೆಯುವ ದಿನಾಂಕ: **(ಸಾಧ್ಯವಾದಲ್ಲಿ) ತಾಂತ್ರಿಕ ಬಿಡ್ ಅನುಮೋದನೆ ನಂತರ.** ಹೆಚ್ಚಿನ ವಿವರಗಳನ್ನು ಮೇಲ್ಕಂಡ ಕಛೇರಿಯಿಂದ ಪಡೆಯಬಹುದು.

ಸಹಿ/- ಕಾರ್ಯಪಾಲಕ ಅಭಿಯಂತರರು, ಸಮನ್ವಯ ಮತ್ತು ಯೋಜನೆ, ಬೆಂದನಪಾ.

ಕರ್ನಾಟಕ ಸರ್ಕಾರ

ವಿಜಯಪುರ ನಗರಾಭಿವೃದ್ಧಿ ಪ್ರಾಧಿಕಾರ, ವಿಜಯಪುರ

ದೂರವಾಣಿ ಸಂಖ್ಯೆ: 08352-276996, ವೆಬ್‌ಸೈಟ್:www.vijayapur.uda.gov.in
ಇ-ಮೇಲ್:bdacommissionerbijapur@gmail.com

ಸಂಖ್ಯೆ: ನಪ್ರಾವಿ/ತಾಂತ್ರಿಕ/ಟೆಂಡರ್/2025-26/2170 ದಿನಾಂಕ:23.02.2026

ಕೆ.ಪಿ.ಪಿ ಪೋರ್ಟಲ್ ಟೆಂಡರ್ ಪ್ರಕಟಣೆ

ವಿಜಯಪುರ ನಗರಾಭಿವೃದ್ಧಿ ಪ್ರಾಧಿಕಾರ ವತಿಯಿಂದ ವಿಜಯಪುರ ನಗರದ ಪ್ರಮುಖ ವೃತ್ತ ಹಾಗೂ ಜಂಕ್ಷನ್‌ಗಳಲ್ಲಿ ಸಂಚಾರ ನಿರ್ವಹಣೆಗಾಗಿ ವ್ಯವಸ್ಥೆ ಕಲ್ಪಿಸುವ ಕಾಮಗಾರಿಗಳನ್ನು ಕರ್ನಾಟಕ ಸರ್ಕಾರದ ಸಾರ್ವಜನಿಕ ಸಂಗ್ರಹಣೆಗಳಲ್ಲಿ ಪಾರದರ್ಶಕತೆ ರನ್ವಯ ಆರ್.ಎಫ್.ಪಿ (Request for Proposal) ಡಾಕ್ಯುಮೆಂಟ್‌ನನ್ವಯ ವಿಶೇಷ ಷರತ್ತುಗಳೊಂದಿಗೆ ಟೆಂಡರ್ ಕರೆಯಲಾಗಿದೆ. ಕಾರಣ ಇಚ್ಛೆಯುಳ್ಳ ಗುತ್ತಿಗೆದಾರರು ಕೆ.ಪಿ.ಪಿ ಪೋರ್ಟಲ್ ಮುಖಾಂತರ ಮಾತ್ರ ತಮ್ಮ ಟೆಂಡರ್ ಅರ್ಜಿಗಳನ್ನು ಸಲ್ಲಿಸಬಹುದಾಗಿದೆ. ಕಾಮಗಾರಿಗಳ ಕುರಿತು ಹೆಚ್ಚಿನ ಮಾಹಿತಿಗಾಗಿ ಆನ್‌ಲೈನ್ ಮೂಲಕ ವೆಬ್‌ಸೈಟ್ (https://kppp.karnataka.gov.in) ನ ಮೂಲಕ ಪಡೆಯಬಹುದಾಗಿದೆ ಅಥವಾ ನಗರಾಭಿವೃದ್ಧಿ ಪ್ರಾಧಿಕಾರ ಕಾರ್ಯಾಲಯದ ತಾಂತ್ರಿಕ ಶಾಖೆಯಿಂದ ಕಛೇರಿ ವೇಳೆಯಲ್ಲಿ ಹಾಗೂ ಕಚೇರಿಯ ವೆಬ್‌ಸೈಟ್ www.vijayapur.uda.gov.in ನಿಂದ ಪಡೆಯಬಹುದಾಗಿದೆ.

1) ಟೆಂಡರ್ ಸಲ್ಲಿಸಲು ಕೊನೆಯ ದಿನಾಂಕ: 24.03.2026 ರಂದು ಸಾಯಂಕಾಲ 5.30 ಘಂಟೆಗೆ.
2) ಟೆಂಡರ್ ತೆರೆಯುವ ದಿನಾಂಕ: 27.03.2026 ರಂದು ಮುಂಜಾನೆ 11.00 ಘಂಟೆಗೆ.

ಈ ಮೇಲ್ಕಂಡ ದಿನಾಂಕಗಳಂದು ಸರ್ಕಾರಿ ರಜೆ ಘೋಷಣೆಯಾದಲ್ಲಿ ಅದರ ಮುಂದಿನ ಕೆಲಸದ ದಿನಾಂಕವನ್ನು ಪರಿಗಣಿಸಲಾಗುವುದು. ಟೆಂಡರ್ ಮುಂದೂಡಿಕೆ, ರದ್ದತಿ ಮತ್ತು ಮರು ಟೆಂಡರ್ ಪ್ರಕಟಣೆ ಕುರಿತು ಮಾಹಿತಿಯನ್ನು ಕೆ.ಪಿ.ಪಿ. ಪೋರ್ಟಲ್‌ನಲ್ಲಿ ಮಾತ್ರ ಪ್ರಕಟಿಸಲಾಗುವದು.

ಅ. ನಂ	ಕಾಮಗಾರಿ ಹೆಸರು ಹಾಗೂ ಇಂಡೆಂಟ್ ಸಂಖ್ಯೆ	ಯೋಜನಾ ವೆಚ್ಚ (ರೂ. ಲಕ್ಷಗಳಲ್ಲಿ)	ಅಂದಾಜು ಮೊತ್ತ (ರೂ. ಲಕ್ಷಗಳಲ್ಲಿ)	ಇ.ಎಂ.ಡಿ ಮೊತ್ತ (ರೂ. ಲಕ್ಷಗಳಲ್ಲಿ)	ಕೆಲಸದ ಅವಧಿ
1	Supply, Installation and Maintenance of Intelligent Transportation Management and Enforcement System (ITEMS) VUDA/2025-26/OW/WORK _ INDENT76	499.61	423.40 (ಜಿಎಸ್‌ಟಿ ಹೊರತುಪಡಿಸಿ)	6.40	3 ತಿಂಗಳು
2	Supply, Installation and Maintenance of Interactive Outdoor Active Display & Junction Improvement. VUDA/2025-26/OW/WORK _ INDENT77	231.44	196.14 (ಜಿಎಸ್‌ಟಿ ಹೊರತುಪಡಿಸಿ)	2.95	3 ತಿಂಗಳು

ಸಹಿ/- (ರಾಜಶೇಖರ ಡಂಬಳ, ಕೆ.ಎ.ಎಸ್)
ಆಯುಕ್ತರು,
ನಗರಾಭಿವೃದ್ಧಿ ಪ್ರಾಧಿಕಾರ, ವಿಜಯಪುರ

ಸಹಿ/- (ಡಾ॥ ಗಂಗಾಧರ ಎಸ್ ಸಂಬಣ್ಣಿ)
ಅಧ್ಯಕ್ಷರು
ನಗರಾಭಿವೃದ್ಧಿ ಪ್ರಾಧಿಕಾರ, ವಿಜಯಪುರ

ವಾಸಾಸಂಇ/ವಿಜಯಪುರ/750/ಕೆಎಸ್‌ಎಂಸಿಎ/2025-26

ಕನ್ನಡಪ್ರಭ
ART | LITERATURE | CULTURE | FOOD | TRAVEL
ಭಾನುಪ್ರಭ
ಪ್ರತಿ ಭಾನುವಾರ
ಪ್ರಚಲಿತ ವಿದ್ಯಮಾನ,
ಸಾಹಿತ್ಯ, ಚಿಣ್ಣರಾಟ,
ಪ್ರವಾಸ,
ಆಹಾರ ವಿಷಯಗಳ
ಸಮೃದ್ಧ ಮಾಹಿತಿ

ಆನೇಕಲ್ ಯೋಜನಾ ಪ್ರಾಧಿಕಾರ

"ಅಣ್ಣ" ನಂ.430, ಹೆನ್ನಾಗರ ಗೇಟ್, ಹೊಸೂರು ಮುಖ್ಯರಸ್ತೆ, ಬೆಂಗಳೂರು – 560099.
ದೂರವಾಣಿ: 080-27835122 ವೆಬ್‌ಸೈಟ್: www.anekal.tpa.gov.in, www.e-vinyasa.kar.nic.in

ಸಂಖ್ಯೆ: ಆಯೋಪ್ರಾ/ಭೂ.ಉ.ಬ/85/2025-26 ದಿನಾಂಕ: 21-02-2026

ಪ್ರಕಟಣೆ

(ಕರ್ನಾಟಕ ನಗರ ಮತ್ತು ಗ್ರಾಮಾಂತರ ಯೋಜನಾ ಕಾಯ್ದೆ 1961 ರ ಕಲಂ 69 ರ ತಿದ್ದುಪಡಿ ಕಾಯ್ದೆಯಂತೆ)

ಆನೇಕಲ್ ಯೋಜನಾ ಪ್ರಾಧಿಕಾರದ ಸ್ಥಳೀಯ ಯೋಜನಾ ಪ್ರದೇಶದ ಮಹಾಯೋಜನೆಗೆ ಸರ್ಕಾರದ ಆದೇಶ ಸಂಖ್ಯೆ: ನಅಇ 151 ಬಿಎಂಆರ್ 2013, ಬೆಂಗಳೂರು ದಿನಾಂಕ: 03.09.2014 ರಂದು ಅನುಮೋದನೆ ನೀಡಲಾಗಿದ್ದು, ಐದು ವರ್ಷಗಳ ಅವಧಿಯು ಈಗಾಗಲೇ ಪೂರ್ಣಗೊಂಡಿದ್ದು, ಕರ್ನಾಟಕ ನಗರ ಮತ್ತು ಗ್ರಾಮಾಂತರ ಯೋಜನಾ ಕಾಯ್ದೆ 1961 ರ ಕಲಂ 69 (2) ರನ್ವಯ ಮಹಾಯೋಜನೆಯಲ್ಲಿ ಸಾರ್ವಜನಿಕ ಉಪಯೋಗಗಳಿಗೆ ಕಾಯ್ದಿರಿಸಿರುವ ಪ್ರದೇಶದ ಭೂ ಉಪಯೋಗವು ರದ್ದಾಗುತ್ತದೆ. ಆದ್ದರಿಂದ ಕರ್ನಾಟಕ ನಗರ ಮತ್ತು ಗ್ರಾಮಾಂತರ ಯೋಜನಾ ಕಾಯ್ದೆ 1961 ರ ಕಲಂ 69 ರನ್ವಯ ಈ ಕೆಳಕಂಡ ಭೂ ಉಪಯೋಗ ನಿಗದಿಪಡಿಸಲು ಅರ್ಜಿದಾರರು ಕೋರಿರುತ್ತಾರೆ. ಕರ್ನಾಟಕ ನಗರ ಮತ್ತು ಗ್ರಾಮಾಂತರ ಯೋಜನಾ ಕಾಯ್ದೆ 1961 ರ ಕಲಂ 69 (3) ರ ಅಡಿಯಲ್ಲಿ ಈ ಕೆಳಕಂಡಂತೆ ಭೂ ಉಪಯೋಗ ನಿಗದಿಪಡಿಸುವ ಸಂಬಂಧ ಈ ಪ್ರಕಟಣೆ ಪ್ರಕಟವಾದ ದಿನಾಂಕದಿಂದ 15 (ಹದಿನೈದು) ದಿನಗಳೊಳಗಾಗಿ ಆಕ್ಷೇಪಣೆಗಳನ್ನು ಲಿಖಿತವಾಗಿ **ಸದಸ್ಯ-ಕಾರ್ಯದರ್ಶಿಗಳು, ಆನೇಕಲ್ ಯೋಜನಾ ಪ್ರಾಧಿಕಾರ, ಆನೇಕಲ್** ಕಛೇರಿಗೆ ಸಲ್ಲಿಸಲು ತಿಳಿಸಲಾಗಿದೆ. ನಿಗದಿತ ಅವಧಿಯ ನಂತರ ಬರುವ ಯಾವುದೇ ಆಕ್ಷೇಪಣೆಗಳನ್ನು ಪರಿಗಣಿಸುವುದಿಲ್ಲ.

ಕ್ರ. ಸಂ.	ಅರ್ಜಿದಾರರ ಹೆಸರು	ತಾಲ್ಲೂಕು	ಹೋಬಳಿ	ಗ್ರಾಮ	ಸ.ನಂ.	ವಿಸ್ತೀರ್ಣ ಎ-ಗುಂ	ಅನುಮೋದಿತ ಮಹಾಯೋಜನೆ ಪ್ರಕಾರ ಭೂ ಉಪಯೋಗ	ಬದಲಾವಣೆ ಕೋರಿರುವ ಭೂ ಉಪಯೋಗ
1	ಶ್ರೀ ಹೆಚ್.ಆರ್. ರವಿಚಂದ್ರ ಬಿನ್ ಲೇ. ರಾಜಶೇಖರ್ ರೆಡ್ಡಿ	ಆನೇಕಲ್	ಕಸಬಾ	ಸಮಂದೂರು	356/6	0-15.08	ಸಾರ್ವಜನಿಕ / ಅರೆ ಸಾರ್ವಜನಿಕ	ಕೈಗಾರಿಕಾ

ಸಹಿ/- ಸದಸ್ಯ-ಕಾರ್ಯದರ್ಶಿ ಹಾಗೂ ನಗರ ಮತ್ತು ಗ್ರಾಮಾಂತರ ಯೋಜನಾ ಜಂಟಿ ನಿರ್ದೇಶಕರು, ಆನೇಕಲ್ ಯೋಜನಾ ಪ್ರಾಧಿಕಾರ, ಆನೇಕಲ್.

ವಾಸಾಸಂಇ/ವಾ.ಪ್ರ/5837/ಅಡ್ವಟೋರ್/2025-26

ಕರ್ನಾಟಕ ಸರ್ಕಾರ

ಕಾರ್ಯಪಾಲಕ ಇಂಜಿನಿಯರವರ ಕಛೇರಿ, ಲೋಕೋಪಯೋಗಿ ಇಲಾಖೆ ವಿಭಾಗ, ಚಿತ್ರದುರ್ಗ.

ಸಂಖ್ಯೆ: ಕಾಇಂ:ಲೋವಿಚಿ:ಎಇ-1:ಟೆಂಡರ್-63:2025-26 ದಿನಾಂಕ: 24.02.2026

ಅಲ್ಪಾವಧಿ ಇ-ಟೆಂಡರ್ ಪ್ರಕಟಣೆ

ಕರ್ನಾಟಕ ಸಾರ್ವಜನಿಕ ಸಂಗ್ರಹಣೆಗಳಲ್ಲಿ ಪಾರದರ್ಶಕತೆ ಅಧ್ಯಾದೇಶ 2000 ಹಾಗೂ ಆಕ್ಟ್ 2000 ರ ಪ್ರಕಾರ ಸ್ಟ್ಯಾಂಡರ್ಡ್ ಟೆಂಡರ್ ಡಾಕ್ಯುಮೆಂಟ್‌ಗಳ ನಿಯಮಗಳನ್ವಯ ಕರ್ನಾಟಕ ರಾಜ್ಯ ಸರ್ಕಾರದ ರಾಜ್ಯಪಾಲರ ಪರವಾಗಿ ಕಾರ್ಯಪಾಲಕ ಇಂಜಿನಿಯರು, ಲೋಕೋಪಯೋಗಿ ಇಲಾಖೆ ವಿಭಾಗ, ಚಿತ್ರದುರ್ಗ ಇವರಿಂದ ಲೆಕ್ಕ ಶೀರ್ಷಿಕೆ ಸಿ.ಇ.ಪಿ.ಎಂ.ಐ.ಜಡ್. (ಕೆ.ಎಂ.ಇ.ಆರ್.ಸಿ) ಅಡಿಯಲ್ಲಿ ಅನುಮೋದನೆಯಾದ ಕಾಮಗಾರಿಗೆ ವಿಸ್ತೃತ ಯೋಜನಾ ವರದಿಗಳನ್ನು (ಡಿಪಿಆರ್) ತಯಾರಿಸಲು ನೊಂದಾಯಿತರಾದ ಯೋಜನಾ ಸಮಾಲೋಚಕರುಗಳನ್ನು ನೇಮಿಸಲು ಕೆಪಿಪಿಪಿ ಪೋರ್ಟಲ್ ಮುಖಾಂತರ ಈ ಕೆಳಕಂಡ ಕಾಮಗಾರಿಗೆ ದ್ವಿ ಲಕೋಟೆ ಪದ್ಧತಿಯಲ್ಲಿ ಟೆಂಡರ್‌ಗಳನ್ನು ಆಹ್ವಾನಿಸಲಾಗಿದೆ. ಅರ್ಹ ಗುತ್ತಿಗೆದಾರರು ವೆಬ್‌ಸೈಟ್ kppp.karnataka.gov.in ನಲ್ಲಿ ಟೆಂಡರ್‌ಗಾಗಿ ವಿವರಗಳನ್ನು ಪಡೆದು ಭಾಗವಹಿಸಬಹುದು.

ಕಾಮಗಾರಿಗಳ ವಿವರ:- 1 ಪ್ಯಾಕೇಜ್-01 ಎ) ಚಿತ್ರದುರ್ಗ ತಾಲ್ಲೂಕು ಸಾಸಲು-ಚಿತ್ರದುರ್ಗ ರಾಜ್ಯ ಹೆದ್ದಾರಿ-48 ಮಾರ್ಗ ಬಿ.ದುರ್ಗ, ಭೀಮಸಮುದ್ರ, ಹಿರೇಕಂದವಾಡಿ, ಮಾಳಪ್ಪನಹಟ್ಟಿ ರಸ್ತೆ ಅಭಿವೃದ್ಧಿ ಬಿ) ಚಿತ್ರದುರ್ಗ ತಾಲ್ಲೂಕು ಸಿರಿಗೆರೆ ಯಿಂದ ಬೊಮ್ಮೇನಹಳ್ಳಿ ಮಾರ್ಗ ಕಡ್ಲಗುದ್ದು ರಸ್ತೆ ಅಭಿವೃದ್ಧಿ ಕಾಮಗಾರಿಯ ವಿಸ್ತೃತ ಯೋಜನಾ ವರದಿಯನ್ನು ತಯಾರಿಸುವ ಕಾಮಗಾರಿ.

ಇ.ಎಂ.ಡಿ.:- ಕಾಮಗಾರಿಗಾರಿವಾರು ಇ.ಎಂ.ಡಿ. ವಿವರಗಳನ್ನು ಕೆಪಿಪಿಪಿ ಪೋರ್ಟಲ್ ಮುಖಾಂತರ ಪಡೆಯುವುದು ಟೆಂಡರ್ ವಿವರಗಳು ಈ ಕೆಳಕಂಡಂತಿವೆ.

(1) ಟೆಂಡರ್ ದಾಖಲೆಗಳನ್ನು ಕೆಪಿಪಿಪಿ ಪೋರ್ಟಲ್ ಮುಖಾಂತರ ದಿನಾಂಕ: 24.02.2026 ರಿಂದ 03.03.2026 ರ 16.00 ಗಂಟೆವರೆಗೆ ಡೌನ್‌ಲೋಡ್ ಮಾಡಿಕೊಳ್ಳಬಹುದು. (2) ಫ್ರೀ ಬಿಡ್ ಮೀಟಿಂಗ್‌ನ್ನು ದಿನಾಂಕ: 27.02.2026 ರ ಪೂರ್ವಾಹ್ನ 11.30 ಗಂಟೆಗೆ ಲೋಕೋಪಯೋಗಿ ಇಲಾಖೆ, ವಿಭಾಗ ಕಛೇರಿಯಲ್ಲಿ ನಡೆಸಲಾಗುವುದು. (3) ಟೆಂಡರ್ ಸಲ್ಲಿಸಲು ಕೊನೆಯ ದಿನಾಂಕ: 03.03.2026 ರ ಅಪರಾಹ್ನ 16.30 ಗಂಟೆಯವರೆಗೆ (4) ಟೆಂಡರ್ ತಾಂತ್ರಿಕ ಬಿಡ್ ತೆರೆಯುವ ದಿನಾಂಕ: 04.03.2026 ರ ಅಪರಾಹ್ನ 16.45 ಗಂಟೆಗೆ (5) ಟೆಂಡರ್ ಆರ್ಥಿಕ ಬಿಡ್ ತೆರೆಯುವ ದಿನಾಂಕ ಮತ್ತು ಸಮಯವನ್ನು ಪ್ರತ್ಯೇಕವಾಗಿ ತಾಂತ್ರಿಕ ಬಿಡ್ ಅನುಮೋದನೆಯಾದ ಯೋಜನಾ ಸಮಾಲೋಚಕರಿಗೆ ತಿಳಿಸಲಾಗುವುದು. (6) ಟೆಂಡರ್ ತಿದ್ದುಪಡಿ / ವಿಸ್ತರಣೆ / ಮಾರ್ಪಾಡುಗಳು ಇದ್ದರೆ ಕೆಪಿಪಿಪಿ ಪೋರ್ಟಲ್‌ನಲ್ಲಿ ಪ್ರಕಟಿಸಲಾಗುವುದು.

ಹೆಚ್ಚಿನ ವಿವರಗಳಿಗೆ ಸದರಿ ಕಛೇರಿಯಿಂದ (ದೂರವಾಣಿ ಸಂಖ್ಯೆ 08194 222446) ಹಾಗೂ ಕೆಪಿಪಿಪಿ ಪೋರ್ಟಲ್ ಸಹಾಯಕ ದೂರವಾಣಿ ಸಂಖ್ಯೆ 91 9240214000 & 91 9240214001. ರಿಂದ ಮಾಹಿತಿ ಪಡೆಯಬಹುದು.

DIPR/CTA/KSMCA/700/2025-26

ಸಹಿ/- ಕಾರ್ಯಪಾಲಕ ಅಭಿಯಂತರರು, ಲೋಕೋಪಯೋಗಿ ಇಲಾಖೆ, ಚಿತ್ರದುರ್ಗ.